
॥ ಹರೇ ರಾಮ ॥

## ಜಗದ್ಗುರುಶಂಕರಾಚಾರ್ಯಮಹಾಸಂಸ್ಥಾನಮ್ – ಶ್ರೀಸಂಸ್ಥಾನಗೋಕರ್ಣ

# ಶ್ರೀರಾಮಚಂದ್ರಾಪುರಮಠ









## ನಮ್ಮ ಪರಂಪರೆ

### ಶ್ರೀರಾಮಚಂದ್ರಾಪುರಮಠ

ಶ್ರೀಕ್ಷೇತ್ರ ಗೋಕರ್ಣದ ಸುಂದರ ಕಡಲ ಕಿನಾರೆಯಲ್ಲಿ, ಸನಾತನ ಧರ್ಮ ಪುನರುತ್ಥಾನದ ಅವತಾರ ಪುರುಷ ಆದಿ ಶಂಕರರಿಂದ ಸ್ಥಾಪಿತ ಪ್ರಮುಖ ಪೀಠ ಶ್ರೀರಾಮಚಂದ್ರಾಪುರಮಠ. ಅವರ ಕರಕಮಲದಿಂದಲೇ ಪೀಠ ಪರಂಪರೆಗೆ ಅನುಗ್ರಹಿತವಾದದ್ದು ಚಂದ್ರಮೌಳೀಶ್ವರ ಲಿಂಗ, ಸೀತಾ-ಲಕ್ಷ್ಮಣ ಸಹಿತ ಶ್ರೀರಾಮಚಂದ್ರ ವಿಗ್ರಹಗಳು. ಅವುಗಳ ಆರಾಧನೆ, ಉಪಾಸನೆ ಅನೂಚಾನವಾಗಿ ಈ ವರೆಗಿನ 36 ಪೀಠಾಧಿಪತಿಗಳಿಂದ ನಡೆಯುತ್ತಾ ಬಂದಿರುವುದು ವಿಶೇಷ.

ಆ ಕ್ಷಣದಿಂದಲೂ ಶ್ರೀಮಠ ಅಧ್ಯಾತ್ಮ ಸಾಧನೆ, ಧರ್ಮ ಸಂಸ್ಥಾಪನೆ, ಪೋಷಣೆಯನ್ನೇ ಜೀವಾಳವಾಗಿಸಿಕೊಂಡಿದೆ. ಇದೇ ಕಾರ್ಯಕ್ಕಾಗಿ ದೇಶದ ಉದ್ದಗಲಗಳಲ್ಲಿ ತನ್ನ ಅಂಗೋಪಾಂಗಗಳನ್ನು ಚಾಚಿಕೊಂಡಿದೆ. ಹಾಗಾಗಿಯೇ ಇದು ವಿಜಯನಗರ, ಕೆಳದಿ ಹಾಗೂ ಮೈಸೂರು ಅರಸರಿಂದಲೂ 'ರಾಜಮಾನ್ಯ' ವಾಗಿ ಹೊರ ಹೊಮ್ಮಿದೆ.

ಶ್ರೀಮಠದ ವೈಶಿಷ್ಟ್ಯಗಳಲ್ಲಿ ಒಂದು ಮನಮೋಹಕ **'ಹಸ್ತಿದಂತ ಸಿಂಹಾಸನ'**. ಪೀಠ ಪರಂಪರೆಯ ಅಪೂರ್ವ ಕೊಡುಗೆಯಾದ ಸಿಂಹಾಸನದ ಸೂಕ್ಷ್ಮ ಕುಸುರಿಯಲ್ಲಿ ಒಡಮೂಡಿರುವ ರಾಮಾಯಣ, ಮಹಾಭಾರತ ಚಿತ್ರಶಿಲ್ಪ ಕ್ರಿಯಾಶೀಲತೆಯ ಪ್ರತೀಕ.

### ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳು

ಶ್ರೀಮಠದ ಅವಿಚ್ಛಿನ್ನ ಪರಂಪರೆಯಲ್ಲಿ 36ನೆಯವರಾಗಿ, ತಮ್ಮ ಅಧ್ಯಾತ್ಮಿಕ ಸಾಧನೆ, ಸಾಮಾಜಿಕ ಸೇವೆ, ಜೈವಿಕ ಕಾಳಜಿಗಳಿಂದ ಅತ್ಯಂತ ತೇಜಃಪುಂಜ ವ್ಯಕ್ತಿತ್ವದೊಂದಿಗೆ ಗುರುತಿಸಿಕೊಂಡವರು ಶ್ರೀ ಶ್ರೀ ರಾಘವೇಶ್ವರರು.

ಅಳಿವಿನಂಚಿನಲ್ಲಿರುವ ಭಾರತೀಯ ಗೋವಂಶದ ಸಂರಕ್ಷಣೆ, ಸಂವರ್ಧನೆಗೆ ಶ್ರೀ ಸ್ವಾಮೀಜಿಯವರು ತಮ್ಮ ಜೀವಿತವನ್ನೇ ಮುಡಿಪಾಗಿಟ್ಟಿರುವುದು ಗಮನಾರ್ಹ. ಸಮಸ್ತ ಜೀವ ಸಂಕುಲದ ಬಗೆಗಿರುವ ಇಂಥ ಅಪರಿಮಿತ ಪ್ರೇಮದಿಂದಾಗಿ ಎಲ್ಲರ ಪ್ರೀತಿಪಾತ್ರ ಗುರುವೆನಿಸಿದ್ದಾರೆ.



ಜೀವ ಕಾರುಣ್ಯ...



ಕೆಲವೇ ದಶಕಗಳ ಹಿಂದಿನ ಮಾತು. 'ಚರಕ' ವೆಂಬ ಭೌತಿಕ ಶಕ್ತಿ ಭರತ ಖಂಡವನ್ನು ಒಗ್ಗೂಡಿಸಿ, ನಮ್ಮ ನೆಲದಿಂದ ವಸಾಹತುಶಾಹಿಯ ನಿರ್ಮೂಲ ಮಾಡಿದ್ದು ನಮ್ಮಲ್ಲಿ ಹಸಿರಾಗಿದೆ. ಇಂದು ರಾಷ್ಟ್ರಮಾನಸವನ್ನು ಒಗ್ಗೂಡಿಸುವುದಿದ್ದರೆ, ಅದು 'ಗೋಮಾತೆ'ಯಿಂದ ಮಾತ್ರ ಸಾಧ್ಯ. ಈ ನೆಲದಿಂದ ಮರೆಯಾಗಿರುವ ಸಾಂಸ್ಕೃತಿಕ ಸಂಪತ್ತು, ಪಾರಂಪರಿಕ ಶ್ರೀಮಂತಿಕೆಗಳಲ್ಲದೇ, ಸಾಮಾಜಿಕ ಶಾಂತಿ-ನೆಮ್ಮದಿಗಳನ್ನು ಗೋಮಾತೆಯೊಬ್ಬಳೇ ಮರಳಿ ದಕ್ಕಿಸಿಕೊಡಬಲ್ಲಳು ಎಂಬುದರಲ್ಲಿ ಸಂಶಯವೇ ಇಲ್ಲ... ಇದು ಶ್ರೀಗಳ ಮೂಲಭೂತ ನಂಬಿಕೆ.

ಅಂಥ ಮಾತೆಯುಳಿವಿಗೆ, ದೇಶೀ ಗೋತಳಿಗಳ ಸಂರಕ್ಷಣೆ, ಸಂವರ್ಧನೆ, ಸಂಶೋಧನೆ, ಸಂಬೋಧನೆಯ ಉದ್ದೇಶದೊಂದಿಗೆ ಪ್ರಾರಂಭಗೊಂಡ ಶ್ರೀಗಳ ಮಹತ್ವಾಕಾಂಕ್ಷಿ ಯೋಜನೆ **'ಕಾಮದುಘಾ'**. ಉದ್ದೇಶಿತ ಗುರಿ ಸಾಧನೆಯ ನಿಟ್ಟಿನಲ್ಲಿ ಸಾಮಾಜಿಕ, ಆರ್ಥಿಕ, ಪಾರಿಸಾರಿಕ, ಧಾರ್ಮಿಕ ಮತ್ತು ಅಧ್ಯಾತ್ಮಿಕ... ಹೀಗೆ ಎಲ್ಲ ರಂಗಗಳಲ್ಲಿಯೂ ಅಭೂತಪೂರ್ವ ಆಂದೋಲನವೊಂದಕ್ಕೆ ಕಂಕಣ ಕಟ್ಟಿಯಾಗಿದೆ. ಈ ಆಂದೋಲನ ದೇಶದ 'ಎರಡನೇ ಹಾಗೂ ಅಂತಿಮ ಸ್ವಾತಂತ್ರ್ಯ ಸಂಗ್ರಾಮ'ವಾಗಿ, ಅಳಿವಿನಂಚಿನಲ್ಲಿರುವ ಭಾರತೀಯ ಗೋವಂಶದ ವೈಭವವನ್ನು ಯಾವಜ್ಜೀವಗೊಳಿಸಿ, ಪ್ರಕೃತಿಯೆಡೆಗಿನ ಪ್ರೇಮವನ್ನು ಪೋಷಿಸುವ ದೊಡ್ಡ ಆಸೆಗೆ ನೀರೆರೆಯುತ್ತಿದೆ.

## ಆರಂಭಗೊಂಡಿದೆ ಭಾರತೀಯ ಗೋವಂಶ ಸಂರಕ್ಷಣೆಯ ಜಾಗರಣ ಅಭಿಯಾನ,
## ಜನಮಾನಸದಲ್ಲಿ ಪ್ರೇಮ ಸಮೃದ್ಧಿಯ ಭಾವಯಾನ

- 2005 ನವಂಬರ್: ಕರ್ನಾಟಕ, ಕೇರಳದಲ್ಲಿ ಭಾರತೀಯ ಗೋಯಾತ್ರೆ
- 2006-07: ಗೋ ಸಂಸತ್ - ಸಂಸತ್ ಕಲಾಪದ ಮಾದರಿಯಲ್ಲಿ ಗೋವಿನ ಬಗೆಗೆ ಸಂವಾದ
- 2007 ಏಪ್ರಿಲ್: ಮಹತ್ವದ ಮೈಲುಗಲ್ಲಾದ ವಿಶ್ವ ಗೋ ಸಮ್ಮೇಳನ
- 2007 ನವೆಂಬರ್: ಕೋಟಿನೀರಾಜನ- ಮಹಿಳಾ ಜಾಗೃತಿಯ ಬೃಹತ್ ಸಮಾವೇಶ
- 2008 ಏಪ್ರಿಲ್: ದೀಪಗೋಪುರ - ಗೋ 'ಅಭಯಧಾಮ' ನಿರ್ಮಾಣ ಸಂಕಲ್ಪ ಹೊತ್ತ ಅತ್ಯಪೂರ್ವ ಕಾರ್ಯಕ್ರಮ

### ಕಾರ್ಯಕ್ರಮದಿಂದ ಕಾರ್ಯಕ್ಷೇತ್ರಕ್ಕೆ..

- ದೇಶಾದ್ಯಂತ ಗೋಶಾಲೆಗಳ ಸ್ಥಾಪನೆ ಮತ್ತು ಅಮೂಲ್ಯ ಭಾರತೀಯ ಗೋ ಸಂಪತ್ತಿನ ಪೋಷಣೆ, ಸಂವರ್ಧನೆ.
- ಹೊಸನಗರದ **ಅಮೃತಧಾರಾ ಗೋಶಾಲೆ:** ಲಭ್ಯ 32 ದೇಶೀ ಗೋತಳಿಗಳಲ್ಲಿ 30 ತಳಿಗಳು ಈ ಗೋಶಾಲೆಯಲ್ಲಿವೆ. ವಿಶ್ವದಲ್ಲಿಯೇ ಪ್ರಥಮ, ಮಾದರಿ ಗೋಶಾಲೆ ತನ್ನ ವೈಶಿಷ್ಟ್ಯದಿಂದ ವಿಶ್ವದೆಲ್ಲೆಡೆಯ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.
- **ಗವ್ಯೋತ್ಪನ್ನ:** ಗೋ ಆಧಾರಿತ ಉತ್ಪನ್ನಗಳ ತಯಾರಿಕೆಯಲ್ಲಿ ಶ್ರೀಮಠದ ಗೋಶಾಲೆಗಳು ಸಕ್ರಿಯವಾಗಿವೆ. ಗೋಮೂತ್ರ, ಅರ್ಕದಿಂದ ಔಷಧಗಳಲ್ಲದೇ ಸಾಬೂನು, ಶ್ಯಾಂಪೂ, ಫೆನಾಯಿಲ್ ಮುಂತಾದ ಪದಾರ್ಥಗಳವರೆಗೆ ಶ್ರೇಣೀಕೃತ ಉತ್ಪಾದನೆ ನಡೆಯುತ್ತದೆ. ಅಷ್ಟೇ ಅಲ್ಲದೇ, ಉತ್ಪನ್ನಗಳನ್ನು ತಯಾರಿಸುವ ಆಸಕ್ತರಿಗೆ ಶ್ರೀಮಠ 'ತರಬೇತಿ ಕಾರ್ಯಾಗಾರ' ಗಳನ್ನೂ ನಿರಂತರವಾಗಿ ನಡೆಸುತ್ತಿದೆ.
- **ವಿಶ್ವ ಗೋ ಸಮ್ಮೇಳನ** (2007 ಏಪ್ರಿಲ್) : ಜಗದೊಳಿತಿಗಾಗಿ ನಡೆದ ಜಗನ್ಮಾತೆ ಗೋವಿನ ಜಾಗತಿಕ ಹಬ್ಬ. ಸಂತರು, ಮಹಂತರು, ವಿಜ್ಞಾನಿಗಳು, ಕೃಷಿಕರು, ಸಾಮಾನ್ಯರು, ಹೀಗೆ ಎಲ್ಲರನ್ನೂ ದೇಶ-ಭಾಷೆ-ಭಾವಗಳ ಭೇದವಿಲ್ಲದೇ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಒಂದೇ ಸೂರಿನಡಿ ಒಗ್ಗೂಡಿಸಿ, ದೇಶೀ ಗೋತಳಿಗಳು ಎದುರಿಸುತ್ತಿರುವ ಅಪಾಯ, ಆಗಬೇಕಾದ ಸಂರಕ್ಷಣೆ-ಸಂವರ್ಧನೆಯ ಸಂದೇಶವನ್ನು ನರನಾಡಿಗಳಲ್ಲಿ ಬಿತ್ತುವಲ್ಲಿ ಈ ಜಾಗತಿಕ ಹಬ್ಬ ಅಭೂತ ಪೂರ್ವ ಯಶಸ್ಸು ಕಂಡಿದೆ.



- **ಗೋ ವಿಶ್ವಕೋಶ:** ಗೋ ಪ್ರಪಂಚಕ್ಕೆ ಸಂಬಂಧಿಸಿದ ಮೊದಲ ವಿಶ್ವಕೋಶ. ಸಂಪಾದನೆಯ ಹಂತದಲ್ಲಿದ್ದು, ಮೊದಲ ನಾಲ್ಕು ಸಂಪುಟಗಳು ಶೀಘ್ರ ಲೋಕಾರ್ಪಣಗೊಳ್ಳಲಿವೆ.
- ಗೋ ವಿಶ್ವ - ಕನ್ನಡ ಇ ಪತ್ರಿಕೆ, Cow Universe - ಆಂಗ್ಲ ಇ ಪತ್ರಿಕೆ, media4cow.blogspot.com - ಬ್ಲಾಗ್ ತಾಣ ಗೋ ಸಂಸಾರ-ಪರಿಸರದ ಮಾಹಿತಿ ಕಣಜಗಳಾಗಿ ರೂಪುಗೊಳ್ಳುತ್ತಿವೆ.









### ಗೋ ಸಂಜೀವಿನೀ:

ಕಸಾಯಿಖಾನೆಯ ಕಡೆಗೆ ಮುಖಮಾಡಿದ ಗೋವುಗಳನ್ನು ಖರೀದಿ
ಪೋಷಿಸುವ ಯೋಜನೆ ಇದಾಗಿದ್ದು, ಧನಾತ್ಮಕ ನಿಲುವನ್ನು ತಳೆ
ಇದರ ವಿಶೇಷ.

### ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ :

ಇದು ಭಾರತದಾದ್ಯಂತ ಸಂಚರಿ ಸಲಿರುವ 108 ದಿನಗಳ ಯಾತ್ರೆ. ಈ ಯಾತ್ರೆ ಶ್ರೀ ಸ್ವಾಮೀಜಿಯವರ ಬಹುದೊಡ್ಡ ಕನಸುಗಳಲ್ಲಿ ಒಂದು. ಸಂತಮಂಡಲ ಸಾರಥ್ಯವಹಿಸುತ್ತಿರುವ ಈ ಯಾತ್ರೆ 'ಗೋವು-ಗ್ರಾಮಗಳ ಕಡೆಗೆ ಮತ್ತೆ ಮರಳುವ' ಸಂದೇಶವನ್ನು ಹೊತ್ತು ದೇಶದ ಉದ್ದಗಲಗಳಲ್ಲಿ ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸಲಿದೆ.

ಯಾತ್ರೆ ಸಪ್ಟೆಂಬರ್ 30, 2009ರಂದು ಹರಿಯಾಣದ ಕುರುಕ್ಷೇತ್ರದಿಂದ ಹೊರಟು, ಕಡೆಯಲ್ಲಿ ಮಹಾರಾಷ್ಟ್ರದ ನಾಗಪುರವನ್ನು ಸೇರಲಿದೆ. 20 ಸಾವಿರ ಕಿ.ಮೀ. ಉದ್ದದ ಈ ಯಾತ್ರೆಗೆ 15ಸಾವಿರ ಉಪಯಾತ್ರೆಗಳು ಗ್ರಾಮೀಣ ಭಾಗದಿಂದ ಬಂದು ಸೇರಲಿವೆ. ಯಾತ್ರೆಯಾದ್ಯಂತ ನಡೆಯುವ 400 ಬೃಹತ್ ಸಮಾವೇಶಗಳಲ್ಲಿ ಗೋಹತ್ಯಾ ನಿಷೇಧಕ್ಕೆ ಕೋಟಿ-ಕೋಟಿ ಸಹಿ ಸಂಗ್ರಹಿಸಲಾಗುತ್ತದೆಯಲ್ಲದೇ, ಗೋವಿಗೆ 'ರಾಷ್ಟ್ರಪ್ರಾಣಿ'ಯ ಸ್ಥಾನಮಾನಗಳನ್ನು ಕೊಡಲು ಆಗ್ರಹಿಸುತ್ತದೆ.

### ಗೋ ಬ್ಯಾಂಕ್ :

ದೇಶೀ ಗೋವುಗಳನ್ನು ಕೊಟ್ಟು-ಕೊಳ್ಳಲು, ಧಾರ್ಮಿಕ ಬ್ಯಾಂಕ್ ಪರಿಕಲ್ಪನೆಯಲ್ಲೇ ರೂಪಿಸಿದ ವಿಶಿಷ್ಟ ವೇದಿಕೆಯೇ 'ಗೋ ಬ್ಯಾಂಕ್'. ಕೆಲವು ಷರತ್ತುಗಳಿಗೆ ಬದ್ಧರಾಗಿ ರೈತರು, ಜನ ಸಾಮಾನ್ಯರು ಇಲ್ಲಿ ವ್ಯವಹರಿಸಬಹುದಾಗಿದೆ.

### ಅಭಯ ಜಿಲ್ಲೆ:

ದೇಶದ 600 ಜಿಲ್ಲೆಗಳ ಪೈಕಿ ನಮ್ಮ ಧಾರವಾಡ ಗೋವಿಗೆ ಸುರಕ್ಷಿತ ಆಶ್ರಯವನ್ನು ಕಲ್ಪಿಸುವ ಮೊದಲ 'ಅಭಯ ಜಿಲ್ಲೆ'ಯಾಗಲಿದೆ. ಕರುಣೆಯೊಂದಿಗೆ ಲಾಭವೂ ಸೇರಿಕೊಳ್ಳಲಿದೆ. ಅಂದರೆ 'ಗವ್ಯ ಡೈರಿ'ಗಳ ಮುಖಾಂತರ ಗೋಮೂತ್ರ, ಗೋಮಯಗಳನ್ನು ಹಳ್ಳಿಮೂಲೆಗಳಿಂದಲೂ ಸಂಗ್ರಹಿಸಿ, ಗವ್ಯೋದ್ಯಮವನ್ನು ಬೃಹತ್ ಪ್ರಮಾಣದಲ್ಲಿ ಬೆಳೆಸಲಾಗುವುದು. ಇದಕ್ಕಾಗಿ ಈಗಾಗಲೇ ಹಲವಾರು ಕೈಗಾರಿಕೋದ್ಯಮಿಗಳು ಮುಂದೆ ಬಂದಿದ್ದಾರೆ.

### ಗೋ ಪರಿವಾರ :

ಗೋ ಪ್ರೇಮಿಗಳ ಅಂತಾರಾಷ್ಟ್ರೀಯ ಮಟ್ಟದ ಸಂಘಟನೆ. ಗೋ ಸಂತತಿಯ ಸಮೃದ್ಧಿಗೆ ದುಡಿಯುವ ಸಮರ್ಥ ವೇದಿಕೆ.



**ವಿದ್ಯಾದಾನ: ಬೆಳಕಾಗಿ, ಬೆಳಕನ್ನು ಹರಡಲು**

ಭಾರತೀಯ ಸಾಂಪ್ರದಾಯಿಕ ಜ್ಞಾನ ಭಂಡಾರದೊಂದಿಗೆ ಆಧುನಿಕ ಶಿಕ್ಷಣವನ್ನು ಕಟ್ಟಿಕೊಡುವ ಹೊಣೆಗಾರಿಕೆಯಲ್ಲೂ ಶ್ರೀಮಠ ಹಿಂದೆ ಬಿದ್ದಿಲ್ಲ. ನಾಡಿನೆಲ್ಲೆಡೆ ಅದರಲ್ಲೂ ಗ್ರಾಮೀಣ ಭಾಗದಲ್ಲಿ ಹಲವು ವಿದ್ಯಾ ಸಂಸ್ಥೆಗಳ ಮೂಲಕ ಅದರ ಸಮರ್ಥ ನಿರ್ವಹಣೆಯಾಗುತ್ತಿದೆ. ಪಾರಂಪರಿಕ ವೇದಗಳೊಟ್ಟಿಗೆ ಆಧುನಿಕ ವಿಜ್ಞಾನದ ಬೋಧನೆ ನಮ್ಮ ಶಿಕ್ಷಣ ಸಂಸ್ಥೆಗಳ ವಿಶೇಷತೆ. ಶ್ರೀಮಠ ಶತ-ಶತಮಾನಗಳಿಂದ ವಿಭಿನ್ನ ಪ್ರಕಾರದ ವಿದ್ವಾಂಸರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಾ ಬಂದಿದೆ.

**ಶ್ರೀ ಭಾರತೀ ಗುರುಕುಲ ವಿಶ್ವವಿದ್ಯಾಲಯಮ್:**

ಕಾಲವೊಂದಿತ್ತು, ಭಾರತವನ್ನು ಬೆಳಕಿನ ನಾಡು, ಜ್ಞಾನಕಾಶಿ ಎಂದೆಲ್ಲ ಕೊಂಡಾಡುತ್ತಿದ್ದರು. ಭಾರತ ಮತ್ತೆ ಅಂತಹ ಅಪೂರ್ವ ಗುಣಗಳಿಂದ ಶೋಭಿಸಬೇಕು ಎಂಬುದು ಶ್ರೀ ಸ್ವಾಮೀಜಿಯವರ ಹೆಬ್ಬಯಕೆ. ಹಾಗಾಗಲು ಅಂದಿನ ತಕ್ಷಶಿಲಾ ಮಾದರಿಯ ವಿಶ್ವವಿದ್ಯಾಲಯಗಳು ನಮ್ಮಲ್ಲಿರಬೇಕೆಂಬುದು ಶ್ರೀಗಳ ಕನಸು.



ಆ ಕನಸಿನ ತಳಹದಿಯೊಂದಿಗೆ ಹೊಸನಗರದ ಶರಾವತಿಯ ಸುಂದರ ಹಚ್ಚ ಹಸಿರಿನ ಮಡಿಲಲ್ಲಿ 'ಶ್ರೀ ಭಾರತೀ ಗುರುಕುಲ ವಿಶ್ವವಿದ್ಯಾಲಯಮ್' ಅನ್ನು ಸಂಸ್ಥಾಪಿಸಲಾಗಿದೆ. ಅಲ್ಲಿ ವೇದ, ಉಪವೇದ, ಸಂಸ್ಕೃತ ಹಾಗೂ ಶಾಸ್ತ್ರೀಯ ಕಲಾ ಪ್ರಕಾರಗಳ ಅಭ್ಯಾಸ ನಡೆಯುತ್ತಿದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದರ ಲಾಭ ಪಡೆಯುತ್ತಿದ್ದಾರೆ. ಸನಾತನ ಸಂಸ್ಕೃತಿಯೊಂದಿಗೆ ವೃತ್ತಿ ಆಧಾರಿತ ಶಿಕ್ಷಣವೂ ಇರುವುದು ಇಲ್ಲಿನ ಅಗ್ಗಳಿಕೆ. ಕಲೆ, ವಾಸ್ತು, ಶಿಲ್ಪ, ಜ್ಯೋತಿಷ್ಯ, ಖಗೋಳ, ಪತ್ರಿಕೋದ್ಯಮ ಹಾಗೂ ಕಂಪ್ಯೂಟರ್ ಮೊದಲಾದ ರಂಗಗಳ ತಜ್ಞರ ಪಾಠ-ಪ್ರವಚನಗಳೂ ಇಲ್ಲಿ ನಡೆಯುತ್ತಿರುತ್ತವೆ.

ಗುರುಕುಲದ ತಾಳೆಗರಿ ಹಾಗೂ ವಸ್ತು ಸಂಗ್ರಹಾಲಯ ಅತ್ಯಪೂರ್ವ ಭಂಡಾರವನ್ನು ಹೊಂದಿದೆ. ಇಷ್ಟಲ್ಲದೇ, ಇನ್ನೂ ಹಲವಾರು ಶಾಲಾ-ಕಾಲೇಜುಗಳನ್ನು ಶ್ರೀಮಠ ನಡೆಸುತ್ತಿದೆ. ಶಿಕ್ಷಣ ಸಾಮಾನ್ಯರ ಕೈಗೆ ಎಟುಕಬೇಕು ಎಂಬುದು ಈ ಎಲ್ಲ ವಿದ್ಯಾ ಸಂಸ್ಥೆಗಳ ಆಶಯ.



> “ **ಸಂತುಷ್ಟ, ಸಂತೃಪ್ತರನ್ನು ರೂಪಿಸುವುದೇ ಶಿಕ್ಷಣದ ಆಶಯ** – ಶ್ರೀ ಸ್ವಾಮೀಜಿ

**ಆರೋಗ್ಯದಾನ : ರೋಗ ಮುಕ್ತ ಸಮಾಜ ನಿರ್ಮಾಣಕ್ಕೆ**

ಕರ್ನಾಟಕ, ಕೇರಳದಲ್ಲಿ ಸುಸಜ್ಜಿತ ಕಣ್ಣಿನ ಆಸ್ಪತ್ರೆ, ಕ್ಯಾನ್ಸರ್ ಸಂಸ್ಥೆ, ಗವ್ಯ ಚಿಕಿತ್ಸಾಲಯಗಳು, ಸಂಚಾರಿ ಚಿಕಿತ್ಸಾಲಯ ಸರ್ವರ ಕ್ಷೇಮಕ್ಕಾಗಿ ದುಡಿಯುತ್ತಿವೆ. ಜತೆಗೆ ರಕ್ತದಾನ ಶಿಬಿರಗಳೂ ನಡೆಯುತ್ತಿರುತ್ತವೆ.



**ಅನ್ನದಾನ: ಸಂಪ್ರೀತಿಗಾಗಿ**

ದಿನನಿತ್ಯ ಸಾವಿರಾರು ಯಾತ್ರಾರ್ಥಿಗಳು ಶ್ರೀಮಠ ಹಾಗೂ ಗೋಕರ್ಣದ ಶ್ರೀ ಮಹಾಬಲೇಶ್ವರ ದೇವರ ದರ್ಶನಕ್ಕಾಗಿ ಬರುತ್ತಾರೆ. ಅವರೆಲ್ಲರ ಸಂಪ್ರೀತಿಗೆ, ತನ್ಮೂಲಕ ಭಗವಂತನ ಸಂಪ್ರೀತಿಗೆ 'ಪ್ರಸಾದ ಭೋಜನ' ಸೇವೆಯನ್ನು ನಿರಂತರವಾಗಿ ನಡೆಸಲಾಗುತ್ತಿದೆ.

**ಅಭಯದಾನ: ದೌರ್ಬಲ್ಯ ನಿವಾರಣೆಗೆ**

ಶ್ರೀಮಠ ತನ್ನ ವಿಶಾಲ ಸ್ವಯಂ ಸೇವಕರ ಜಾಲದೊಂದಿಗೆ ಸಮಾಜ ಕಲ್ಯಾಣ ಕಾರ್ಯದಲ್ಲಿ ಸಕ್ರಿಯವಾಗಿದೆ. ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಧನ ಸಹಾಯ, ಬಡ ಕುಟುಂಬಗಳನ್ನು ದತ್ತು ತೆಗೆದುಕೊಳ್ಳುವುದು, ಮಹಿಳಾ ವಸತಿ ಗೃಹಗಳನ್ನು ನಡೆಸುವುದು ಹಾಗೂ ಸಲಹೆ, ಸಹಕಾರಗಳು ಕೆಲವು ಉದಾಹರಣೆಗಳು. ಯುವಕ, ಯುವತಿಯರಿಗೆ ಸ್ವ-ಉದ್ಯೋಗ ತರಬೇತಿ ಶಿಬಿರ, ಮಹಿಳೆಯರಿಗೆ ಸಹಕಾರಿ ತತ್ತ್ವದ ಅಡಿಯಲ್ಲಿ ಅರಶಿನ, ಕುಂಕುಮ ಹಾಗೂ ಖಾದ್ಯ ಪದಾರ್ಥಗಳ ತಯಾರಿ ಶಿಬಿರಗಳೂ ನಡೆಯುತ್ತವೆ.

ಶ್ರೀಮಠ ಧಾರ್ಮಿಕ ಆಚಾರ-ವಿಚಾರ, ವಿಧಿ-ವಿಧಾನಗಳ ವಿಷಯದಲ್ಲಿ ಮಾರ್ಗದರ್ಶಕ ಸ್ಥಾನದಲ್ಲಿದೆ. ದೇವಾಲಯ ಜೀರ್ಣೋದ್ಧಾರ, ನಿರ್ವಹಣೆಯಲ್ಲೂ ಶ್ರೀಮಠ ಸಕ್ರಿಯವಾಗಿದೆ.

## ಶ್ರೀ ಮಹಾಬಲೇಶ್ವರ ದೇವಾಲಯ, ಗೋಕರ್ಣ :



Dvi° AU

ಗೋಕರ್ಣ, ಭಾರತದ ಪವಿತ್ರ ತೀರ್ಥಕ್ಷೇತ್ರಗಳಲ್ಲಿ ಒಂದು. 'ದಕ್ಷಿಣದ ಕಾಶಿ' ಎಂಬ ಖ್ಯಾತಿಯೂ ಇದಕ್ಕಿದೆ. ಬಂದ ಸಾವಿರಾರು ಭಕ್ತಾದಿಗಳು ಜಗತ್ತಿನ ಏಕೈಕ 'ಆತ್ಮಲಿಂಗ'ಕ್ಕೆ ತಮ್ಮ ಕೈಯಾರೆ ಅಭಿಷೇಕ, ಪೂಜೆಗಳನ್ನು ಮಾಡುತ್ತಾರೆ. ಈ 'ಹನುಮ ಜನ್ಮಭೂಮಿ' ಶ್ರೀರಾಮಚಂದ್ರಾಪುರಮಠದ ಜನ್ಮಸ್ಥಳವೂ ಆಗಿದೆ. ಆದಿ ಶಂಕರರ ವಚನದಂತೆ ಶ್ರೀ ಮಹಾಬಲೇಶ್ವರನ ಉಪಾಸನೆ, ಅರ್ಚನೆ ಶ್ರೀಮಠದ ಹಕ್ಕು, ಕರ್ತವ್ಯ ಎರಡೂ ಆಗಿದೆ.

ಸದ್ಯ, ಸುತ್ತಮುತ್ತಲ ಸಮಸ್ತರ ಸಹಯೋಗದಲ್ಲಿ ದೇವಾಲಯ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಬರಲಿರುವ ಸಂವತ್ಸರದಲ್ಲಿ ಶ್ರೀ ಮಹಾಬಲೇಶ್ವರನ 'ಅಷ್ಟಬಂಧ ಮಹೋತ್ಸವ'ವೂ ಜರುಗಲಿದೆ.





## ಅಶೋಕೆ: ಮಠದ ಮೂಲ

ಅದು ಆದಿ ಶಂಕರರ ಭಾರತ ಯಾತ್ರೆಯ ಸಂದರ್ಭ. ಗೋಕರ್ಣಕ್ಕೆ ಭೇಟಿಯಿತ್ತಾಗ ಸಮೀಪದ ಅಶೋಕೆಯಲ್ಲಿನ ಮಲ್ಲಿಕಾರ್ಜುನಸ್ವಾಮಿಯ ಪೂಜಾರ್ಚನೆಗೆ ತೆರಳುತ್ತಾರೆ. ಆಗಲ್ಲಿ ಕೌತುಕಮಯ ಸನ್ನಿವೇಶವೊಂದು ಎದುರಾಗುತ್ತದೆ. ಹೆಣ್ಣು ಹುಲಿಯೊಂದು ಜಿಂಕೆ ಮರಿಗೆ ಹಾಲೂಡಿಸುತ್ತಿರುತ್ತದೆ. ಅದನ್ನು ಕಂಡ ಶಂಕರರಿಗೆ ರೋಮಾಂಚನವಾಗುತ್ತದೆ. 'ಶೋಕ, ಭಯ'ಗಳಿಲ್ಲದ ಅಶೋಕೆಯಲ್ಲಿ ಧರ್ಮಪೀಠವೊಂದನ್ನು ಸ್ಥಾಪಿಸುತ್ತಾರೆ. ಅದೇ ಇಂದಿನ ಶ್ರೀರಾಮಚಂದ್ರಾಪುರಮಠ.

ಶ್ರೀಮಠದ ತವರಾದ ಅಶೋಕೆಯ ಪುನರುತ್ಥಾನ ಶ್ರೀ ಸ್ವಾಮೀಜಿಯವರ ಕನಸು. ಈಗಾಗಲೇ ಇರುವ ಶ್ರೀ ಮಲ್ಲಿಕಾರ್ಜುನ ದೇವಾಲಯದ ಜೀರ್ಣೋದ್ಧಾರ, ಹೊಸ ಮಾದರಿಯ ಸಾವಿರ ನಂದಿ ಗೋಶಾಲೆ ಹಾಗೂ ನೂತನ ಗುರುಮಂದಿರದ ನಿರ್ಮಾಣ ಇವು ಅಶೋಕೆಗಾಗಿ ರೂಪುಗೊಂಡ ಯೋಜನೆಗಳು.

## ಚಂದ್ರಮೌಳೀಶ್ವರ ದೇವಾಲಯ:

**ಕೇರಳೀಯ ಶಿಲ್ಪ-ಕಲ್ಪಗಳ ಅಲಂಕಾರದಲ್ಲಿ**

ಶ್ರೀಮಠದ ಆರಾಧ್ಯ ಚಂದ್ರಮೌಳೀಶ್ವರನಿಗೊಂದು ಭವ್ಯ ದೇವಾಲಯ.

ಹೊಸನಗರದ ಶರಾವತೀ ತೀರದಲ್ಲಿ ಕೇರಳದ ವಾಸ್ತುಶಿಲ್ಪ ಪರಿಕಲ್ಪನೆಯಲ್ಲಿ ದೇವಾಲಯ ನಿರ್ಮಾಣವಾಗುತ್ತಿದೆ. ಕೊಳದ ಮಧ್ಯದಲ್ಲಿ ಗಜಪೃಷ್ಠಾಕಾರದ ದೇವಾಲಯ ದಿವ್ಯವಾಗಿ ಕಂಗೊಳಿಸಲಿದೆ.



## ರಾಮಾಯಣ ಪ್ರವಚನ :

ಶ್ರೀ ಸ್ವಾಮೀಜಿಯವರು ನಡೆಸಿಕೊಡುವ ರಾಮಾಯಣ ಪ್ರವಚನಗಳು ಜ್ಞಾನ ಪ್ರದೀಪಗಳಾಗಿದ್ದು, ಎಲ್ಲರನ್ನೂ ತನ್ನತ್ತ ಸೆಳೆಯುತ್ತಿವೆ.



## ಧ್ಯಾನ: ದೃಷ್ಟಿಯನ್ನು ಗುರಿಯಲ್ಲಿಯೇ ನೆಟ್ಟಿಡಲು

ಶ್ರೀ ಸ್ವಾಮೀಜಿಯವರ ನೇರ ಮಾರ್ಗದರ್ಶನದಲ್ಲಿ ಧ್ಯಾನ ಹಾಗೂ ಯೋಗ ತರಗತಿಗಳು

## ಶ್ರೀ ಭಾರತೀ ಪ್ರಕಾಶನ:

ಶ್ರೀ ಭಾರತೀ ಪ್ರಕಾಶನ ಶ್ರೀಮಠದ ಪ್ರಕಾಶನ ವಿಭಾಗ. ಇದು ಧರ್ಮಭಾರತೀ – ಅಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ, ಧಾರ್ಮಿಕ ಪಂಚಾಂಗ ಮತ್ತು ಇನ್ನಿತರ ಅಮೂಲ್ಯ ಕೃತಿಗಳನ್ನು ಪ್ರಕಾಶಿಸುತ್ತದೆ.



## ಉತ್ಸವ–ಮಹೋತ್ಸವ: ಸಂಭ್ರಮ, ಸಡಗರ

ಹೊಸನಗರ, ಶ್ರೀ ರಾಮಾಯಣ ಮಹಾಸತ್ರದಂತಹ ಜಗತ್ತು ಕಂಡುದ ಕೇಳರಿಯದ ರಾಮಾಯಣದ ಅತಿದೊಡ್ಡ ಹಬ್ಬಕ್ಕೂ ಸಾಕ್ಷಿಯಾಯಿತು. ಏಪ್ರಿಲ್, 2006ರಲ್ಲಿ ನಡೆದ ಇದರಲ್ಲಿ ರಾಮನ ಅನನ್ಯ ಆರಾಧನೆಗೆ ಲಕ್ಷ–ಲಕ್ಷ ಜನರನ್ನು ಒಂದೆಡೆ ಸೇರಿಸಲು ಸಾಧ್ಯವಾಯಿತು. ಶ್ರೀಮಠದ ಉತ್ಸವಗಳ ಆಯೋಜನೆ, ಆಚರಣೆ ಮಾತ್ರವಲ್ಲದೇ, ಶ್ರೀ ತ್ರಿವಿಕ್ರಮಾನಂದಸ್ವಾಮಿ ಮಠದಲ್ಲಿ ಜರುಗಿದ ಶಿವಸತ್ರಕ್ಕೂ (ಫೆಬ್ರವರಿ, 2008) ಮಾರ್ಗದರ್ಶನ ನೀಡಲಾಗಿತ್ತು.

## ವರ್ಷಾವಧಿ ಕಾರ್ಯಕ್ರಮಗಳು:

- ಶ್ರೀಮಠದಲ್ಲಿ ಪ್ರತಿವರ್ಷ **ಶ್ರೀರಾಮನವಮಿ**ಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.
- ಶ್ರೀ ಸ್ವಾಮೀಜಿಯವರ **ಚಾತುರ್ಮಾಸ್ಯ ವ್ರತ**ದ ಸಂದರ್ಭದಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿಶಿಷ್ಟ ವೇದಿಕೆಯನ್ನು ಕಲ್ಪಿಸಲಾಗುತ್ತದೆ.
- ಶ್ರೀಮಠ ಸಾಮವೇದ, ಆಯುರ್ವೇದ, ಯಕ್ಷಗಾನ ಹಾಗೂ ಇನ್ನುಳಿದ ಶಾಸ್ತ್ರೀಯ ಕಲೆಗಳ ಕುರಿತಾದ ಸಂಶೋಧನೆಯನ್ನು ಕೈಗೆತ್ತಿಕೊಂಡಿದೆ.

## ಪ್ರಶಸ್ತಿ–ಪುರಸ್ಕಾರಗಳು :

- **ಶ್ರೀ ರಾಮಾನುಗ್ರಹ ಪ್ರಶಸ್ತಿ:** ಸಮಾಜೋನ್ನತಿಗಾಗಿ ದುಡಿದ ಗಣ್ಯರಿಗೆ
- **ಶ್ರೀ ಮಾತಾ ಪ್ರಶಸ್ತಿ** : ಸಮಾಜೋದ್ಧರಣ ಕಾರ್ಯದಲ್ಲಿ ಸಂಲಗ್ನರಾದ ಮಹಿಳೆಯರಿಗೆ
- **ಗೋಪಾಲ ಗೌರವ:** ದೇಶೀ ಗೋವುಗಳ ಸಂರಕ್ಷಣೆ, ಸಂವರ್ಧನೆಗೆ ಜೀವಿತವನ್ನೇ ಸಮರ್ಪಿಸಿಕೊಂಡ ಮಹನೀಯರಿಗೆ
- **ಚಾತುರ್ಮಾಸ್ಯ ಪ್ರಶಸ್ತಿ :** ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ವಿದ್ಯಾಕ್ಷೇತ್ರದ ವಿಭಿನ್ನ ಪ್ರತಿಭೆಗಳಿಗೆ
- **ಸರ್ವಧಾರಿ ಸಮ್ಮಾನ** : ಈ ಪ್ರಶಸ್ತಿಯನ್ನು ಸರ್ವಧಾರಿ ಚಾತುರ್ಮಾಸ್ಯ (2008) ಸಂದರ್ಭದಲ್ಲಿ ನೀಡಲಾಯಿತು. ಸಮಸ್ತರ ಹಿತಕ್ಕಾಗಿ ದುಡಿದ 100ಕ್ಕೂ ಅಧಿಕ ಮಹನೀಯರನ್ನು ಸರ್ವಧಾರಿ ಸಮ್ಮಾನದಿಂದ ಗೌರವಿಸಲಾಯಿತು.



ಹಸ್ತಿದಂತ ಸಿಂಹಾಸನ

॥ ವಂದೇ ಗೋ ಮಾತರಮ್ ॥

“ ಪರಮಾನಂದವನ್ನು ಸಾಕ್ಷಾತ್ಕರಿಸಿಕೊಳ್ಳುವ
ಈ ದಿವ್ಯ ಪಯಣಕ್ಕೆ
ಎಲ್ಲರೂ ಬನ್ನಿ

## ಆಡಳಿತ ಕಚೇರಿ

ಶ್ರೀರಾಮಚಂದ್ರಾಪುರಮಠ
'ಶ್ರೀರಾಮಾಶ್ರಮ', #2ಎ, ಜೆ.ಪಿ. ರಸ್ತೆ,
ಗಿರಿನಗರ 1ನೇ ಹಂತ,
ಬೆಂಗಳೂರು – 560085
ದೂ : 080–26724979, 26721510
ಮಿಂಚಂಚೆ : info@srimath.org
ಅಂತರ್ಜಾಲ : www.srimath.org

## ಪ್ರಧಾನ ಮಠ

ಶ್ರೀರಾಮಚಂದ್ರಾಪುರಮಠ
ಹನಿಯಾ – 577418,
ಹೊಸನಗರ, ಶಿವಮೊಗ್ಗ ಜಿಲ್ಲೆ
ದೂ : 08185–256050,
256048, 256170




ಶ್ರೀ ಸ್ವಾಮೀಜಿಯವರ ಪೀಠಾರೋಹಣ ದಶಮಾನೋತ್ಸವದ
ಶುಭ ಸಂದರ್ಭದಲ್ಲಿ....